ಸೆಪ್ಟೆಂಬರ್ 6, 1987 ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ ರೂ.2-25

ತರಂಗ

ಜಿ.ವಿ. ಅಯ್ಯರ್
70

ಸಿನಿಮಾ ಕತೆ
ಕೆಂಡದ ಮಳೆ



ಆರತಿ ಹುಕ್ಕೇರಿ

ಮಿಸ್ ಕರ್ನಾಟಕ

ಎರಡೂ ಒಂದೇ ರೀತಿ ಕಾಣುತ್ತವೆ



ಮಿಶ್ರಣ: 70% ಕಾಫಿ 30% ಚಿಕೋರಿ

ಮಿಶ್ರಣ: 80% ಕಾಫಿ 20% ಚಿಕೋರಿ

ಒಂದರಲ್ಲಿ ಕಹಿ ಕಡಿಮೆ

ಚಿಕೋರಿ ಮಿಶ್ರಣದ ಎರಡು ಇನ್‌ಸ್ಟಂಟ್ ಕಾಫಿಯ ನಡುವೆ ವ್ಯತ್ಯಾಸವನ್ನು ಹೇಳುವುದು ಕಷ್ಟ. ಆದರೆ, ಮಿಶ್ರಣವಂತೂ ಅತಿ ಮುಖ್ಯವೆಂಬುದನ್ನು ನೀವು ಒಪ್ಪೇ ಒಪ್ಪುವಿರಿ. ಚಿಕೋರಿ ಅತಿ ಹೆಚ್ಚಾದರೆ ಕಾಫಿ ಕಡು ಕಹಿಯಾಗಬಹುದು. ಆದ್ದರಿಂದಲೇ ಸನ್‌ರೈಸ್‌ನಲ್ಲಿರುವ ಹೆಚ್ಚಿನ ಕಾಫಿಸ್ವಾದ ಮತ್ತು ಸತ್ವ ಖಂಡಿತ ಉತ್ತಮವೆಂದು ನಿಮಗೆ ಅನಿಸುತ್ತದೆ.ಏಕೆಂದರೆ ಮಾಮೂಲು ಇನ್‌ಸ್ಟಂಟ್ ಮಿಶ್ರಣಗಳಲ್ಲಿರುವ 70:30 ರ ಮಿಶ್ರಣಕ್ಕೆ ಹೋಲಿಸಿದರೆ, ಸನ್‌ರೈಸ್, ಕಾಫಿ ಮತ್ತು ಚಿಕೋರಿಯ ಮಿಶ್ರಣವನ್ನು 80:20 ರ ಪ್ರಮಾಣದಲ್ಲಿ ಹೊಂದಿದೆ. ಆದ್ದರಿಂದ ಸನ್‌ರೈಸ್ ಕಹಿ ಇಲ್ಲದೇ ಕುಡಿಯಲು ಸೊಗಸಾಗಿದೆ.

ಆದರೆ ನಮ್ಮ ಮಾತನ್ನೇ ನೀವು ನಂಬಬೇಕಾಗಿಲ್ಲ. ನೀವೇ ಕುಡಿದು ನೋಡಿ.



Nestlé®

ಸನ್‌ರೈಸ್

ಇನ್‌ಸ್ಟಂಟ್ ಕಾಫಿ-ಚಿಕೋರಿ ಮಿಶ್ರಣ


ಹೆಚ್ಚು ಕಾಫಿ ಇರುವ ಮಿಶ್ರಣ


HTA 5118A KAN

ತರಂಗಾಂತರಂಗ

ಸಂಪುಟ – 5 ಸಂಚಿಕೆ – 36
ಸೆಪ್ಟೆಂಬರ್ 6 – 12, 1987

ಮುಖಪುಟ:
ಆರತಿ ಹುಕ್ಕೇರಿ
ಮಿಸ್ ಕರ್ನಾಟಕ
ವರ್ಣಚಿತ್ರ: ಎಸ್. ಸಿ. ದೇಸಾಯಿ
ವಿನ್ಯಾಸ: ಮೋನಪ್ಪ






ನಿರ್ವಾಹಕ ಸಂಪಾದಕ ಟಿ. ಮೋಹನದಾಸ ಪೈ	ಮುದ್ರಣ: ಟಿ. ಸತೀಶ್ ಯು. ಪೈ ಮಣಿಪಾಲ ಪ್ರಕಾಶನ ಪ್ರೈ. ಲಿ. ಮಣಿಪಾಲ	ಸಂಪಾದಕ ಸಂತೋಷಕುಮಾರ ಗುಲ್ವಾಡಿ
ಮುದ್ರಣ ನಿರ್ವಹಣೆ: ಪಿ. ಭಾಸ್ಕರ್ ರಾವ್	ಸಂಸ್ಕರಣ: ಡಿ. ಆರ್. ಕಾಂಬಳಿ	ಸಹಾಯಕ ಸಂಪಾದಕ: 'ಚಿರಂಜೀವಿ' (ಬೆಂಗಳೂರು)

ಪ್ರಕಾಶಕ: ಮಣಿಪಾಲ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್ ಲಿ. ಉದಯವಾಣಿ ಬಿಲ್ಡಿಂಗ್, ಮಣಿಪಾಲ.

ವಿಳಾಸ: ಪ್ರೆಸ್ ಕಾರ್ನರ್, ಮಣಿಪಾಲ, 576 119 ದೂರವಾಣಿ: 21241 (ಉಡುಪಿ)

ಕೆ. ಜನಾರ್ದನ



ವಿಧಾನ ವೀಧಿಯಿಂದ

'ಉಗುಳು' ಗೋಷ್ಠಿಗಳು

ಆಕಾಶವನ್ನು ನೋಡಿ, ಮೇಲಕ್ಕೆ ಉಗುಳಿದರೆ ಅದು ತಮ್ಮ ಮುಖದ ಮೇಲೇ ಬೀಳುತ್ತದೆ ಎಂಬುದು ನಮ್ಮ ಬಹುತೇಕ ರಾಜಕಾರಣಿಗಳಿಗೆ ಗೊತ್ತಿಲ್ಲ. ಯಾತಕ್ಕೆಂದರೆ ಅಂಥವರಿಗೆ ಉಗುಳುವುದೇ ಮುಖ್ಯ ವಿನಾ ತಮ್ಮ ಮುಖದ ರಕ್ಷಣೆಯಲ್ಲ. ಕೆಲವರಿಗೆ ಅದರ ಅರಿವಿದ್ದರೂ 'ಅದೇನು ಮಹಾ' ಎಂಬ ದಪ್ಪ ಪ್ರವೃತ್ತಿಯವರು ಅವರು. "ತನಗೆ ಬೇಕು ಎಂದೆನ್ನಿಸಿದಾಗ ಉಗುಳಿದೆನೋ ಇಲ್ಲವೋ ಅಷ್ಟೇ ಸಾಕು" ಎಂಬುದರಲ್ಲಿ ತೃಪ್ತಿ ಪಡೆದು ಮುಂದಿನ ಉಗುಳಿಗೆ ಸಿದ್ಧರಾಗುವವರು. ಇವರು. ಇದೊಂದು ವಿಚಿತ್ರ ತಳಿ.

ಈಚೆಗೆ ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್ಸಿನ ಟಿ. ಎನ್. ನರಸಿಂಹಮೂರ್ತಿ ಅವರು ಉಗುಳಿದರು. ಅವರು ಉಗುಳಬೇಕೆಂದು ಉಗುಳಿದರೋ ಅಥವಾ ಪತ್ರಕರ್ತರನ್ನು ಕಂಡು ಆವೇಶಭರಿತರಾಗಿ ಉಗುಳಿದರೋ ಗೊತ್ತಿಲ್ಲ; ಅಂತೂ ಉಗುಳಿದರು.

"ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಭ್ರಷ್ಟಾಚಾರದ ಅವತಾರ" - ಪತ್ರಿಕೆಗಳಲ್ಲಿ ಬಂತು. ಸಾಮಾನ್ಯವಾಗಿ ತಮ್ಮ ಮೇಲೆ ಬರುವ ವೈಯಕ್ತಿಕ ಟೀಕೆಗಳನ್ನು ಅಷ್ಟೊಂದು ಗಮನಕ್ಕೆ ತೆಗೆದುಕೊಳ್ಳದೇ - ಅಂದರೆ ಮರು ಪತ್ರಿಕಾ ಹೇಳಿಕೆ ವಾಪಸು ಕೊಡುವ ಹವ್ಯಾಸಕ್ಕೆ ಹೋಗದೇ ಸುಮ್ಮನಿರುವ ಹೆಗಡೆಯವರು ತಾವು ಹನ್ನೊಂದನೇ ಅವತಾರವಾಗಿರುವುದನ್ನು ಪತ್ರಿಕೆಗಳಲ್ಲಿ ಓದಿದಾಗ ನಿಜಕ್ಕೂ ಕೆರಳಿದರು. "ನರಸಿಂಹಮೂರ್ತಿಯವರ ಪ್ರಕಾರ ನಾನು ಭ್ರಷ್ಟಾಚಾರದ ಅವತಾರವಾಗಿದ್ದರೆ, ಅವರು ಅದನ್ನು ಸಾಬೀತುಗೊಳಿಸಬೇಕು. ಏಳು ದಿನಗಳೊಳಗೆ ಪುರಾವೆಗಳೊಂದಿಗೆ ಅವರು ಮುಂದೆ ಬರದೇ ಹೋದರೆ ಅಥವಾ ಸುಳ್ಳು ಹೇಳಿಕೆ ಕೊಟ್ಟಿರುವುದಕ್ಕೆ ಸಾರ್ವಜನಿಕವಾಗಿ ಕ್ಷಮೆ ಕೇಳದೇ ಹೋದರೆ ಅವರ ವಿರುದ್ಧ ದಾವೆ ಹೂಡುತ್ತೇನೆ" ಎಂದು ಪತ್ರಿಕಾ ಹೇಳಿಕೆ ನೀಡಿ ಸೆಡ್ಡು ಹೊಡೆದರು.

ನರಸಿಂಹಮೂರ್ತಿಯವರು. ಮುಖ್ಯಮಂತ್ರಿಗಳನ್ನು ಭ್ರಷ್ಟಾಚಾರದ ಅವತಾರ ಎಂದು ಕರೆದದ್ದು ಆಗಸ್ಟ್ ನಾಲ್ಕರಂದು. ಹೆಗಡೆಯವರು ಸವಾಲು ಒಡ್ಡಿದ್ದು ಏಳರಂದು. ಜನತಾ ಪಕ್ಷದವರೆಲ್ಲಾ ನರಸಿಂಹಮೂರ್ತಿಯವರ "ವಿಳಾಸ" ಹುಡುಕಲು ಹೊರಟಿದ್ದರು. ಇದ್ದಕ್ಕಿದ್ದ ಹಾಗೇ ಆಸ್ಕರ್ ಫೆರ್ನಾಂಡೀಸ್ ಅವರು ಪ್ರತ್ಯಕ್ಷರಾದರು: ನರಸಿಂಹಮೂರ್ತಿಯವರಲ್ಲ. "ನಾವು ನರಸಿಂಹಮೂರ್ತಿಯವರ ಜತೆಗೆ ಇದ್ದೇವೆ. ಹೆಗಡೆಯವರ ಸವಾಲನ್ನು ಒಪ್ಪಿಕೊಳ್ಳುತ್ತೇವೆ" ಎಂದು ಪ್ರದೇಶ ಕಾಂಗ್ರೆಸ್ಸಿನ ಪರವಾಗಿ ಸಾರಿದರು. ಜನತಾ ಶಾಸಕರೇ ಭ್ರಷ್ಟಾಚಾರಿಗಳೆಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರೇ ಹೇಳಿರುವಾಗ ಅವರ ನಾಯಕರಾದ ಹೆಗಡೆಯವರು ಭ್ರಷ್ಟಾಚಾರದ ಅವತಾರ ಮಾತ್ರವಲ್ಲ, 'ಭ್ರಷ್ಟಾಚಾರ ಚಕ್ರವರ್ತಿ' ಎಂದು ಫೆರ್ನಾಂಡಿಸ್ ಅವರೂ ಉಗುಳಿದರು. ಹೆಗಡೆಯವರು ಸುಮ್ಮನಿರಲಿಲ್ಲ. "ಚಕ್ರವರ್ತಿ ಇರುವುದು ದೆಹಲಿಯಲ್ಲಿ. ಫೆರ್ನಾಂಡಿಸರಿಗೆ ಗೊತ್ತಿರಬೇಕಲ್ಲ" ಎಂದು ತಿವಿದರು, ನವಿರಾಗಿ. ಫೆರ್ನಾಂಡಿಸರ ಉಗುಳು ದೆಹಲಿಗೆ ಹಾರಿತ್ತು, ಪ್ರಧಾನಿಯ ಮೇಲೆ. ಅಲ್ಲಿನ ಪ್ರತಿಕ್ರಿಯೆಯೇನೆಂಬುದು ಪ್ರಕಟವಾಗಿಲ್ಲ. ಖಾಸಗಿಯಾಗಿ ಪ್ರಕಟವಾಗಿದ್ದರೆ, ಪ್ರಾಯಶಃ ಈ ಕಾಂಗ್ರೆ ಮಂದಿಯ ಉಗುಳುವ ಚಟ ಸ್ವಲ್ಪ ಕಡಿಮೆಯಾದೀತು.

ಆಸ್ಕರ್ ಫೆರ್ನಾಂಡಿಸರ ಪತ್ರಿಕಾಗೋಷ್ಠಿಯಾದ ಮೂರು ದಿನಗಳ ನಂತರ, ಅಂದರೆ ಹೆಗಡೆಯವರ ಏಳು ದಿನಗಳ ಗಡುದಾಟಿದ ಮಾರನೇ ದಿನ ನರಸಿಂಹಮೂರ್ತಿಯವರು ಪತ್ರಿಕಾಗೋಷ್ಠಿ ಕರೆದು ಒಂದಷ್ಟು ಉದ್ದದ ಹೇಳಿಕೆ ನೀಡಿ, ಮತ್ತೊಂದಷ್ಟು ಬಾಯಿ ಚಪಲ ತೀರಿಸಿಕೊಂಡು ಎದ್ದು ಹೋದರು. ಆ ಕಡೆ ಪುರಾವೆಯೂ ಇಲ್ಲ, ಈ ಕಡೆ 'ಸಾಬೀತೂ' ಇಲ್ಲ. ತಾವು ಮಾಡಿದ ಆರೋಪಗಳ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕು ಎಂದು ಹಳೆಯ ಶಂಖ ಊದಿ, ಈ ಬಗ್ಗೆ ತನಿಖೆಗೆ ಆದೇಶ ನೀಡುವಂತೆ ಹೆಗಡೆಯವರೇ ಪ್ರಧಾನಿಗೆ ಬರೆಯಬೇಕೆಂಬ ವಿಚಿತ್ರ ಹೇಳಿಕೆ ನೀಡಿ ಕೆಲವು ಕಾಂಗ್ರೆ ನಾಯಕರಿಗೆ 'ಸ್ಕ್ರೂ ಲೂಸ್' ಆಗಿದೆ ಎಂಬ ಅರ್ಥದ ಮುಖ್ಯಮಂತ್ರಿಯವರ ಸಂಶಯವನ್ನು ತುಸು ಮಟ್ಟಿಗೆ ಅನ್ವರ್ಥಗೊಳಿಸಿದರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಈ ನಾಯಕರು. ಒಟ್ಟಿನಲ್ಲಿ ನರಸಿಂಹಮೂರ್ತಿಯವರು ಏನನ್ನು ಸಾಧಿಸಿದ ಹಾಗಾಯಿತು? ರಾಜಕಾರಣಿಗಳ ಪತ್ರಿಕಾಗೋಷ್ಠಿಗಳೆಂದರೆ ಬರಬರುತ್ತಾ ಉಗುಳು ಗೋಷ್ಠಿಗಳಾಗತೊಡಗಿರುವುದು ಈ ಮಂದಿಯಲ್ಲಿರುವ ಮೂಲ ತರಬೇತಿಯ, ಸಾರ್ವಜನಿಕ ಸೌಜನ್ಯದ, ಎಲ್ಲದಕ್ಕಿಂತ ಹೆಚ್ಚಾಗಿ ತಿರುಳಿನ ಕೊರತೆಯನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ.

ಆದರೆ ಈ ಉಗುಳು ಗೋಷ್ಠಿಗಳ ನಡುವೆಯೂ. ಸಾರ್ವಜನಿಕರ ಕುತೂಹಲ ಕೆರಳಿಸಿದ ಒಂದು ಅಂಶದ ಮೇಲೆ ಬೆಳಕು ಬಿದ್ದು ರಹಸ್ಯ ಸ್ಫೋಟವಾದುದು ಒಂದು ಕುತೂಹಲಕಾರೀ "ಸೈಡ್ ಷೋ". ಕಳೆದ ವರ್ಷ ನಡೆದ ಚುನಾವಣೆಗಳ ಕಾಲದಲ್ಲಿ ಜಕ್ಕೂರು ವಿಮಾನ ನಿಲ್ದಾಣದಲ್ಲಿ ವಿಮಾನವೊಂದು ಬಂದು ಇಳಿದಿತ್ತು. ಅದರಲ್ಲಿ ಸೂಟು ಕೇಸುಗಳು ತುಂಬಾ ನೋಟಿನ ಕಂತೆಗಳು ಇದ್ದುವು ಎಂಬುದಾಗಿ ಚುನಾವಣಾ ಕಾಲದಲ್ಲಿ ಆಗ ಗೃಹ ಸಚಿವರಾಗಿದ್ದ ರಾಚಯ್ಯನವರು ಹೇಳಿದ್ದರು. ಆ ಬಗ್ಗೆ ಅಂದು, ಕಾಂಗ್ರೆ ಮಂದಿ ವಿವರಣೆ ಕೊಡಲು ಪ್ರಯತ್ನಿಸಿರಲಿಲ್ಲ. ಮೊನ್ನೆ ನರಸಿಂಹಮೂರ್ತಿಯವರು, ಹೆಗಡೆಯವರನ್ನು 'ಅವತಾರ' ರೂಪದಲ್ಲಿ ಕಂಡಾಗ, ಅದಕ್ಕೆ ಹೆಗಡೆಯವರು ಉತ್ತರ ಕೊಟ್ಟಾಗ, ಸೂಟ್‌ಕೇಸುಗಳ ಬಗ್ಗೆ ಸೂಚ್ಯವಾಗಿ ಪ್ರಸ್ತಾಪಿಸಿ 'ಅದೇನು' ಎಂದು ಕೇಳಿದ್ದರು. ಆಸ್ಕರ್ ಫೆರ್ನಾಂಡಿಸರ ಪತ್ರಿಕಾ ಗೋಷ್ಠಿಯಲ್ಲಿ ಪತ್ರಕರ್ತರು ಬಿಡಲಿಲ್ಲ. ಫೆರ್ನಾಂಡಿಸರಿಗೆ ಬೇರೆ ದಾರಿಯೂ ಇರಲಿಲ್ಲ.

"ಅದು ಚುನಾವಣೆಗೆ ಬಂದ ದುಡ್ಡು. ಹಣವಿಲ್ಲದೆ ಚುನಾವಣೆಗಳನ್ನು ನಡೆಸಲಿಕ್ಕಾಗುತ್ತದೆಯೇ? ಹೆಗಡೆಯವರೇ ಹೇಳಲಿ" ಎಂದು ಪೆಚ್ಚು ಪೆಚ್ಚಾಗಿ ಹೇಳಿದರು. ಸೂಟ್‌ಕೇಸುಗಳಲ್ಲಿ ರಹಸ್ಯ ರೂಪದಲ್ಲಿ ಬಂದಿಳಿಯುವ ಇಂಥ ಹಣ ಕಾಂಗ್ರೆಗೆ ಹೇಗೆ ದೊರಕಿತು? ದೆಹಲಿ ಅಥವಾ ಇನ್ನೆಲ್ಲಾದರೂ ನೋಟುಗಳನ್ನು ಬೆಳೆಯುವ ಗಿಡಗಳನ್ನು ಇವರು ನೆಟ್ಟಿದ್ದಾರೆಯೇ? ಅಥವಾ ಚುನಾವಣಾ ಖರ್ಚಿಗೆಂದು ರಿಸರ್ವ್ ಬ್ಯಾಂಕು ಪ್ರತ್ಯೇಕವಾಗಿ ಮುದ್ರಿಸಿ ಕೊಟ್ಟಿತೇ? 'ಇದು ಚುನಾವಣಾ ಖರ್ಚಿಗಾಗಿ ಬಂದ ಹಣ' ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಹೇಳಿದ ಮಾತ್ರಕ್ಕೇ ಅದು ಪವಿತ್ರ ಹಣವಾಗಿ ಪರಿವರ್ತನೆಗೊಳ್ಳುವುದೇ? ಆಕಾಶ ನೋಡಿ ಉಗುಳಿದರೆ ಆಗುವುದು ಇಷ್ಟೇ.

ಬರೀ ಪತ್ರಿಕಾ ಪ್ರಚಾರ ಪಡೆಯುವ ಉದ್ದೇಶದಿಂದ ರಾಜಕಾರಣಿಗಳ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾ ಹೋಗುವ ನರಸಿಂಹಮೂರ್ತಿಯವರಂಥ ರಾಜಕಾರಣಿಗಳು, ಈ ದೇಶದಲ್ಲಿ ಯಾರೂ, ಯಾವುದೂ ಸರಿಯಿಲ್ಲ ಎಂಬ ಭಾವನೆಯನ್ನು ಸಾರ್ವತ್ರಿಕವಾಗಿ ಮೂಡಿಸಿ, ದೇಶದ ಆತ್ಮಸ್ಥೈರ್ಯವನ್ನು ಕುಂದಿಸುವ ಕೆಲಸ ಮಾಡುತ್ತಿದ್ದಾರೆ. ಅದರ ಬದಲು ನಿಜವಾಗಿಯೂ ನಡೆದಿರುವ ಭ್ರಷ್ಟಾಚಾರಗಳ ಒಂದೆರಡು ಪ್ರಕರಣಗಳನ್ನು ಪ್ರಾಯೋಗಿಕವಾಗಿ ಎತ್ತಿಕೊಂಡು, ಪುರಾವೆಗಳನ್ನು ಸಂಗ್ರಹಿಸಿ, ಸಾಬೀತುಗೊಳಿಸುವ ಧೈರ್ಯ ಹಾಗೂ ಮನಸ್ಸು ಮಾಡಿದರೆ, ಅಂಥ ಪ್ರಕರಣಗಳನ್ನು ಲೋಕಾಯುಕ್ತರ ಮುಂದೆ ತಂದು ಭ್ರಷ್ಟಾಚಾರಿಗಳನ್ನು ಬೊಟ್ಟು ಮಾಡಿ ತೋರಿಸಿದರೆ, ಭ್ರಷ್ಟಾಚಾರ ಪ್ರಾಯಶಃ ಕಡಿಮೆಯಾದೀತು. ಜತೆಗೆ, ನರಸಿಂಹಮೂರ್ತಿಯಂಥವರು 'ಪೇಪರ್ ಟೈಗರ್'ಗಳೆನ್ನಿಸುವ ಬದಲು ನಿಜವಾದ ಟೈಗರ್‌ಗಳಾಗಲೂಬಹುದು. ಆದರೆ ಇಂಥ ಸತ್ಕಾರ್ಯಗಳಿಗೆ ಅವರಿಗೆಲ್ಲಿದೆ ವ್ಯವಧಾನ? ಆಗೊಮ್ಮೆ ಈಗೊಮ್ಮೆ ಉಗುಳಿದರೆ ಸಾಕು ಅಷ್ಟೇ. ●



"ನ್ಯಾಯಾಧೀಶರ ಪೀಠಕ್ಕೆ ಹೆಸರು ಶಿಫಾರಸ್ಸಿನಲ್ಲಿ ಸ್ವಜನ ಪಕ್ಷಪಾತ ತೋರಿದವರಿಗೆ, ಧಿಕ್ಕಾರ! ಏನ್ರೀ, ನಮ್ಮ ಸಂಬಂಧಿಕರಲ್ಲಿ ಅಂತಹ ಯೋಗ್ಯತೆಯವರು ಯಾರೂ ನಿಮಗೆ ಕಾಣಿಸ್ಲಿಲ್ಲವೆ?"



ಮುಖ ಪುಟದ ಛಾಯಾಗ್ರಾಹಕ ಎನ್.ಸಿ. ದೇಸಾಯಿ

ಕನ್ನಡ ಪತ್ರಿಕೆಗಳನ್ನು ನಿಯಮಿತವಾಗಿ ಓದುವವರಿಗೆ ಛಾಯಾಚಿತ್ರಕಾರ ಎನ್.ಸಿ. ದೇಸಾಯಿ ಅವರ ಪರಿಚಯ ಇರಲೇಬೇಕು. ಛಾಯಾಚಿತ್ರಗಳ ಜೊತೆಗೆ ಲೇಖನವನ್ನೂ ಬರೆಯುವ ಹವ್ಯಾಸ ಇವರದು.

"ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್"ನ ಫೋಟೋಗ್ರಫಿ ವಿದ್ಯಾರ್ಥಿಯಾದ ನಾನಾ ಸಾಹೇಬ ಚಿದಂಬರ (ಬಹದ್ದೂರ) ದೇಸಾಯಿಯವರ ಹುಟ್ಟೂರು ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಅಗಡಿ. 1924ರಲ್ಲಿ ಹುಟ್ಟಿದ ಇವರ ವಿದ್ಯಾಭ್ಯಾಸ ಹೈಸ್ಕೂಲ್ ಶಿಕ್ಷಣವನ್ನು ದಾಟಲಿಲ್ಲ. 1942ರ 'ಚಲೇಜಾವ್' ಚಳವಳಿ ಸೇರಿದ ತಪ್ಪಿಗೆ ತಂದೆ ಶಾಲೆ ಬಿಡಿಸಿ ಹಳ್ಳಿಗೆ ಕರೆದೊಯ್ದು ಬೇಸಾಯಕ್ಕೆ ತೊಡಗಿಸಿದರು.

ಮದುವೆಯ ಅನಂತರ ಮುಂಬಯಿ ಸೇರಿದ ದೇಸಾಯಿಯವರು 'ಪ್ರೀಮಿಯರ್ ಆಟೋಮೊಬೈಲ್'ನಲ್ಲಿ ಕೆಲಸಕ್ಕೆ ಸೇರಿದರು. ನೌಕರಿಯಲ್ಲಿದ್ದುಕೊಂಡೇ ಜಿ.ಎಸ್.ದಂಡಾವತಿಮಠ ಅವರ ನೂತನ 'ಕಲಾಮಂದಿರ'ದಲ್ಲಿ ಚಿತ್ರಕಲೆಯ ಶಿಕ್ಷಣ ಮುಗಿಸಿದರೂ ಅವರನ್ನು ಒಲಿದದ್ದು ಛಾಯಾಚಿತ್ರವೇ.

1984ರಲ್ಲಿ ಉದ್ಯೋಗದಿಂದ ನಿವೃತ್ತಿ ಹೊಂದಿದರೂ ಛಾಯಾಚಿತ್ರ ಅವರನ್ನು ಬಿಟ್ಟಿಲ್ಲ. ಕೆಮರಾ ತಗಲಿಸಿಕೊಂಡು ಊರೂರು ಅಲೆಯುವದು ತಪ್ಪಿಲ್ಲ. ಈಗ ಹುಬ್ಬಳ್ಳಿಯಲ್ಲಿ ಜಾಹಿರಾತು ಕಲೆ ಮಾಡಿ ಹೊಸ ಆಯಾಮ ಕೊಡುತ್ತಿದ್ದಾರೆ. ತರುಣರನ್ನೂ ನಾಚಿಸುವ ಉತ್ಸಾಹಿ ಇವರು. ●

ವಿಳಾಸ : 22, ಗೋವನ್ ಟವರ್
ಲ್ಯಾಮಿಂಗ್ಟನ್ ರಸ್ತೆ, ಹುಬ್ಬಳ್ಳಿ – 580 020

ಡಿ 4/22 ಪ್ರೀಮಿಯರ್ ಕಾಲೋನಿ, ಕುರ್ಲಾ ಮುಂಬಯಿ – 400 070

ಜೋಗಕ್ಕಿಂತಲೂ ದೊಡ್ಡ ಜಲಪಾತ

ಗಾಂಧೀಜಿ ಮೈಸೂರು ಪ್ರವಾಸ ಕೈಗೊಂಡಿದ್ದರು. ಒಬ್ಬರು ಅವರೊಡನೆ – "ಬಾಪೂಜಿ... ನೀವು ಇಲ್ಲಿಯತನಕ ಬಂದಿರುವಾಗ 'ಜೋಗದ ಜಲಪಾತ' ನೋಡದೆ ಹೋಗಬೇಡಿ" – ಎಂದರು.

"ಈ ಜಲಪಾತದಲ್ಲಿ ಅಂತಹ ವೈಶಿಷ್ಟ್ಯವೇನಿದೆ?" – ಕೇಳಿದರು ಗಾಂಧೀಜಿ.

"ನಿಮಗಿನ್ನೂ ಗೊತ್ತಿಲ್ಲವೇ? ಪ್ರಪಂಚದಲ್ಲೇ ಅತಿ ಎತ್ತರದ ಜಲಪಾತ ಇದು... ಇಷ್ಟೊಂದು ಎತ್ತರದಿಂದ ನೀರು ಬೀಳುವುದನ್ನು ನೀವು ಬೇರೆಲ್ಲೂ ಕಾಣಲಾರಿರಿ. ಆಹಾ, ಎಂಥ ಮನಮೋಹಕ ಸೌಂದರ್ಯ! ನೀವು ಈ ದೃಶ್ಯವನ್ನು ತಪ್ಪದೇ ನೋಡಬೇಕು".

"ನಾನು ಜನಸೇವೆಗೆ ಹೊರಟವನು. ಪ್ರಾಕೃತಿಕ ಸೌಂದರ್ಯ ನೋಡಲೆಂದು ವೇಳೆ ಹಾಳು ಮಾಡುವುದು ಸಮಂಜಸವಲ್ಲ" ಎಂದರು ಗಾಂಧೀಜಿ.

"ಆದರೆ ಬಾಪೂ... ಜೋಗದಲ್ಲಿ ನೀರು ಎಷ್ಟೊಂದು ಎತ್ತರದಿಂದ ಕೆಳಗೆ ಬೀಳುತ್ತದೆಂದರೆ..."

"ಅದಕ್ಕಿಂತಲೂ ಎತ್ತರದಿಂದ ನೀರು ಬೀಳುವುದನ್ನು ನಾನು ಕಂಡಿರುವೆ" – ಅವರ ಮಾತನ್ನು ನಡುವೆಯೇ ತಡೆದು ನುಡಿದರು ಗಾಂಧೀಜಿ.

"ಅದೆಂತು ಸಾಧ್ಯ! ಭೂಗೋಳದ ಯಾವ ಪುಸ್ತಕವನ್ನೇ ತೆರೆದು ನೋಡಿದರೂ ಜೋಗಕ್ಕಿಂತ ದೊಡ್ಡ ಜಲಪಾತ ನಿಮಗೆ ಕಾಣಸಿಗದು" – ನುಡಿದರು ಆ ಸಜ್ಜನರು.

"ಮಳೆ ಬರುವಾಗ, ನೀರು ಎಷ್ಟೊಂದು ಎತ್ತರದಿಂದ ಕೆಳಗೆ ಬೀಳುತ್ತದೆ? ಜೋಗದ ಜಲಪಾತಕ್ಕಿಂತಲೂ ಹೆಚ್ಚು ಎತ್ತರದಿಂದ ನೀರು ಬೀಳುವುದಿಲ್ಲವೆ? ಮಳೆ ಬರುವುದನ್ನು ನಾನೆಂದೂ ಕಂಡಿಲ್ಲವೆಂದು ನಿಮ್ಮ ಭಾವನೆಯೆ?" – ನಕ್ಕು ನುಡಿದರು ಬಾಪೂಜಿ.

(ಸಂಗ್ರಹ) ಸುಬ್ರಾಯ ಅಡಿಗ



ಕಂ. ರೇಖಾ ಹಂದೆ, ಹಾಗೂ ರೋಟರ್ಯಾಕ್ಟ್ ಅಧ್ಯಕ್ಷ ಗೌತಮ್ ಒಸ್ವಾಲ್ ಅವರು ಆರತಿಗೆ ಕಿರೀಟವನ್ನು ಧರಿಸುತ್ತಿರುವುದು.



ಕೇವಲ ಸೌಂದರ್ಯ ಮಾತ್ರವಲ್ಲ.
ವ್ಯವಹಾರ ಜ್ಞಾನ, ಚಾತುರ್ಯ,
ಬುದ್ಧಿವಂತಿಕೆಗಳ ಸ್ಪರ್ಧೆ ಇದು.
ಹುಬ್ಬಳ್ಳಿ ರೋಟರ್ಯಾಕ್ಟ್‌ನವರಿಂದ
ಅಖಿಲ ಕರ್ನಾಟಕ ಮಟ್ಟದಲ್ಲಿ
ಸುಂದರಿಯರ ಪ್ರದರ್ಶನ
ಒಂದು ಆಕರ್ಷಕ ಕಾರ್ಯಕ್ರಮ.

ಹುಬ್ಬಳ್ಳಿಯಲ್ಲಿ ಸೌಂದರ್ಯ ಸ್ಪರ್ಧೆ

ಮಿಸ್ ಕರ್ನಾಟಕ ಆರತಿ ಹುಕ್ಕೇರಿ

ಚಿತ್ರ - ಲೇಖನ : ಎಸ್. ಸಿ. ದೇಸಾಯಿ

ವಿಳಾಸ : 23 ಗೋವನ್ ಟವರ್,
ಲ್ಯಾಮಿಂಗ್‌ಟನ್ ರಸ್ತೆ,
ಹುಬ್ಬಳ್ಳಿ – 580 020



ಆರತಿ ರನ್ನರ್ ಅಪ್ ಜೊತೆಗೆ. ಅವಳ ಬಲಗಡೆ ಸೂಝಿನ್ ವರ್ಗೀಸ್–ಎರಡನೆಯ ರನ್ನರ್ ಅಪ್. ಎಡಗಡೆ ಸುಷ್ಮಾ ಗುಪ್ತಾ –ಮೊದಲ ರನ್ನರ್ ಅಪ್. ಹಿಂಬದಿಯಲ್ಲಿ – ಮುಖ್ಯ ಅತಿಥಿ ಅಡಿಷನಲ್ ಎಸ್. ಪಿ. ರಾಮಮೂರ್ತಿ.

ಸೀರೆಯ ಸೊಬಗು



ಸೀರೆಯ ಬೆಡಗು



ನಮ್ಮ ನಮ್ಮ ಸಮಸ್ಯೆಗಳೇ ತಲೆಭಾರವಾಗಿ ಬದುಕು ಜಡವಾಗಿ, ಸುತ್ತಲಿನ ಸೌಂದರ್ಯವನ್ನು ಸವಿಯಲು ಮನಸ್ಸು ಬರುತ್ತಿಲ್ಲ ಎಂಬ ಪರಿಸ್ಥಿತಿ. ನಿರಾಶರಾಗ ಬೇಡಿ – ನಮ್ಮಲ್ಲಿ ಸೌಂದರ್ಯ ಹೇರಳವಾಗಿದೆ ಎಂದು ಬದುಕಿನ ಬೆಳಕಿನ ದಿಕ್ಕನ್ನು ನೋಡುವವರೂ ಇದ್ದಾರೆ. ಇತ್ತೀಚೆಗೆ ಹುಬ್ಬಳ್ಳಿ ರೋಟರ್ಯಾಕ್ಟ್ ಕ್ಲಬ್ ಆಶ್ರಯದಲ್ಲಿ ನಡೆದ ಮಿಸ್ ಕರ್ನಾಟಕ ಸೌಂದರ್ಯ ಸ್ಪರ್ಧೆ ಅಂಥ ಒಂದು ಸೊಗಸಾದ ಕಾರ್ಯಕ್ರಮ.

ಈ ಬಗೆಯ ಕಾರ್ಯಕ್ರಮ ಹಿಂದೆಯೂ ನಡೆದಿದೆ. ಜೇಸಿಯವರು ಮಾಡಿದ್ದಾರೆ. ಆದರೆ ಅಖಿಲ ಕರ್ನಾಟಕ ಮಟ್ಟದಲ್ಲಿ ಹುಬ್ಬಳ್ಳಿಯಲ್ಲಿ ನಡೆದುದು ಮೊದಲ ಬಾರಿ ಎಂದೇ ಇದು ಒಂದು ವಿಶೇಷ ಆಕರ್ಷಕ ಘಟನೆ ಆಯಿತು. ಹುಬ್ಬಳ್ಳಿಯ ಔಷಧ ತಯಾರಿಕಾ ಸಂಸ್ಥೆಯ ಉದ್ಯಮಿ ಗೌತಮ್ ಓಸ್ವಾಲ್ (ರೋಟರ್ಯಾಕ್ಟ್ ಅಧ್ಯಕ್ಷ) ಅವರು ಸೌಂದರ್ಯ ಸ್ಪರ್ಧೆಯ ಕನಸನ್ನು ಕಂಡು ಬೆಡಗಿನ ಕಾರ್ಯಕ್ರಮವಾಗಿ ಯೋಜನೆ ಮಾಡಿದವರು.

ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ಮಟ್ಟದ ಕಾರ್ಯಕ್ರಮ ಮಾಡಿದರೆ ಅದಕ್ಕೆ ಅಖಿಲ ಕರ್ನಾಟಕ ಸ್ವರೂಪ ಬರುವುದು ಹೇಗೆ? ಎಂಬ ಸಂಶಯ ಗೌತಮ್ ಓಸ್ವಾಲರಿಗೆ ಇದ್ದೇ ಇತ್ತು. (ವಿಕೇಂದ್ರೀಕರಣ ಎಂಬ ಸ್ಲೋಗನ್ನು ಕೂಗುತ್ತ ಎಲ್ಲವನ್ನೂ ಬೆಂಗಳೂರಲ್ಲಿ ಕೇಂದ್ರೀಕರಿಸುವುದರಿಂದ ಉಳಿದ ಕಡೆ ಉಸಿರುಗಟ್ಟಿದಂತಾಗುತ್ತದೆ!)

ಆದರೆ ಕರ್ನಾಟಕದಲ್ಲಿ ಸುಂದರಿಯರಿಗೇನೂ ಕಡಿಮೆ ಇಲ್ಲ ಎಂಬಂತೆ ಬೆಂಗಳೂರು, ಮಂಗಳೂರು, ಮೈಸೂರು, ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ರಾಣೆಬೆನ್ನೂರು, ನವಲಗುಂದ ಮೊದಲಾದ ಕಡೆಗಳಿಂದ ಒಟ್ಟು 25 ತರುಣಿಯರು ಪ್ರವೇಶಪತ್ರ ಕಳಿಸಿದ್ದರು. ಕರ್ನಾಟಕದ ಯಾವ ಭಾಗದ ತರುಣಿಯರು ಎಷ್ಟು ಸಂಪ್ರದಾಯ ಶರಣೆಯರು, ಪ್ರಗತಿಪರರು ಎಂದು ಈ ಪ್ರವೇಶಗಳನ್ನು ಕಂಡಾಗಲೇ ಗೊತ್ತಾಗಿ ಹೋಯಿತು. ಹುಬ್ಬಳ್ಳಿಯಲ್ಲೇ ನಡೆದ ಈ ಕಾರ್ಯಕ್ರಮಕ್ಕೆ ಹುಬ್ಬಳ್ಳಿಯಿಂದ ಒಂದೇ ಒಂದು ಪ್ರವೇಶಪತ್ರ ಬಂದಿತ್ತು! ಬೆಂಗಳೂರು, ಮಂಗಳೂರು ಬೆಡಗಿಯರು ಬರುತ್ತಾರೆಂದು ಹುಬ್ಬಳ್ಳಿ ಸುಂದರಿಯರು ಹೆದರಿದ್ದರೆ?

ಹುಬ್ಬಳ್ಳಿಯ ಸವಾಯ್ ಗಂಧರ್ವ ಕಲಾಮಂದಿರದಲ್ಲಿ ಈ ಸುಂದರಿಯರ ಉತ್ಸವ ನಡೆಯಿತು. ತೀರ್ಪುಗಾರರಾಗಿ 1984ರ ಮಿಸ್ ಇಂಡಿಯಾ ಆಗಿದ್ದ ರೇಖಾ ಹಂದೆ, ಜ್ಯೋತಿ ಮಡಿಮನ್ ಮತ್ತು ಉಚ್ಚಿಲ ಇದ್ದರು. ಜನರೆಲ್ಲ ಕುಟುಂಬ ಸಹಿತ ಬಂದಿದ್ದರು. ಗೌರವಾನ್ವಿತ ಜನರೇ ಸಭಾಭವನದಲ್ಲಿ ಕಿಕ್ಕಿರಿದು ತುಂಬಿದ್ದರು. ಕಾರ್ಯಕ್ರಮಗಳ ಯಶಸ್ಸಿಗೆ ಇದೇ ಮುಖ್ಯ ಬುನಾದಿ.

ವಾಸ್ತವಿಕವಾಗಿ ಫ್ಯಾಷನ್ ಪೆರೇಡ್ ಮತ್ತು ಮಿಸ್ ಸುಂದರಿ ಸ್ಪರ್ಧೆ ಹೇಗಿರುತ್ತದೆ ಎಂಬ ಕಲ್ಪನೆಯೇ ಹೆಚ್ಚಿನ ಜನಗಳಿಗೆ ಇಲ್ಲ. ಮುಂಬಯಿ ಕಡೆ ನಡೆಯುವ ಇಂಥ ಸ್ಪರ್ಧೆಗಳಲ್ಲಿ ತರುಣಿಯರು ಈಜು ಉಡುಪು (ಬಿಕಿನಿ) ಹಾಕಿಕೊಂಡು ಅರೆನಗ್ನರಾಗಿ ಎಲ್ಲರ ಮುಂದೆ ಬರಬೇಕಾಗುತ್ತದೆ. ಇದನ್ನು ತಿಳಿದು ಅನೇಕ ಸುಂದರಿಯರು ಈ ಉದ್ರೇಕಕಾರಿ ಪ್ರದರ್ಶನಕ್ಕೆ ಒಪ್ಪುವುದೇ ಇಲ್ಲ. ಮನೆಯವರ ಸಮ್ಮತಿಯೂ ಇರುವುದಿಲ್ಲ. ಈ


ಸೀಮಾ
ಉಜ್ವಲ ತಾರೆ
CEMA
ಸೀಮಾ ಮತ್ತು ಶ್ರೀದೇವಿ
ಇಬ್ಬರೂ ನಂ. 1
ಇಬ್ಬರದೂ ಎಲ್ಲರನ್ನು
ಬೆರಗುಗೊಳಿಸಿದ ಉಜ್ವಲತೆ.
ಸೀಮಾ®
ಬಲ್ಬ್ ಮತ್ತು ಟ್ಯೂಬ್
CEMA
CEMA
CEMA
ತಾರೆಗಳಂತಹ ಸೊಬಗು - ಸೀಮಾ



1984ರ ಮಿಸ್ ಇಂಡಿಯಾ ರೇಖಾ ಹಂದೆ. ನಿರ್ಣಾಯಕರಲ್ಲಿ ಒಬ್ಬರು. ಮತ್ತು ಈ ಸ್ಪರ್ಧೆಯನ್ನು ಯೋಜಿಸಿದ ರೋಟರ್ಯಾಕ್ಟ್ ಕ್ಲಬ್ಬಿನ ಅಧ್ಯಕ್ಷ ಗೌತಮ್ ಒಸ್ವಾಲ್.

ರೀತಿಯ ಬಿಕಿನಿ ಪ್ರದರ್ಶನಗಳಿಂದ ಸೌಂದರ್ಯ ಸ್ಪರ್ಧೆ ಎಂದರೆ ಕೆಟ್ಟ ಅಭಿರುಚಿ ಎಂಬ ಅಭಿಪ್ರಾಯವೂ ಉಂಟಾಗಿದೆ.

ಆದರೆ ಹುಬ್ಬಳ್ಳಿಯ ಸ್ಪರ್ಧೆಯಲ್ಲಿ ಇಂಥ ಯಾವ ಅತಿರೇಕಗಳೂ ಇರಲಿಲ್ಲ. ಸೌಂದರ್ಯ ಸ್ಪರ್ಧೆಯನ್ನು ಇವರು ಗೌರವದ ವೇದಿಕೆಗೆ ತಂದರು. ಆದಕ್ಕಾಗಿ ಅಭಿನಂದ ನೀಯರು.

ತರುಣಿಯರೆಲ್ಲ ಕಡ್ಡಾಯವಾಗಿ ಸೀರೆಯುಟ್ಟುಕೊಂಡೇ ವೇದಿಕೆಗೆ ಬಂದರು. ಈ ಅಚ್ಚ ಭಾರತೀಯ ಉಡುಪು ಎಷ್ಟು ನವಿರು, ಎಷ್ಟು ಸೊಗಸು, ಅದರಲ್ಲಿ ಎಷ್ಟೊಂದು ಲಯಬದ್ಧತೆ, ಆಕರ್ಷಣೆ ಇದೆ ಎಂದು ಈ ಪ್ರದರ್ಶನ ಮತ್ತೊಮ್ಮೆ ಗುರುತಿಸಿತು. ಅನಂತರದ ಪ್ರವೇಶಗಳಲ್ಲಿ ಅವರವರ ಆಯ್ಕೆಯ ಉಡುಪು ಉಟ್ಟುಕೊಂಡು ಬರಲು ಅನುಮತಿ ಇತ್ತು. ಒಬ್ಬೊಬ್ಬ ಸುಂದರಿ ವ್ಯಯಾರವಾಗಿ ಬೆಡಗಿನಿಂದ ವೇದಿಕೆಗೆ ಬರುತ್ತಿದ್ದರು. ಅವರ ಹೆಸರು, ಊರು ಮೊದಲಾದ ವಿವರಗಳನ್ನು ಹಿನ್ನೆಲೆಯಲ್ಲಿ ಕೊಡುತ್ತಿದ್ದರು. ಯಾರು ಮಿಸ್ ಕರ್ನಾಟಕ ಆಗುತ್ತಾರೆ ಎಂಬ ಬಗ್ಗೆ ತೀವ್ರ ಪೈಪೋಟಿ ಇರುವಂತೆ ಅಲಂಕಾರ, ಶೃಂಗಾರ ಮಾಡಿಕೊಂಡು ಬಂದಿದ್ದ ಹುಡುಗಿಯರು ಒಬ್ಬರನ್ನು ಇನ್ನೊಬ್ಬರು ಮೀರಿಸುತ್ತಿದ್ದರು.

ಕೊನೆಗೂ ಬೆಳಗಾವಿಯ ಹುಡುಗಿ ಆರತಿ ಹುಕ್ಕೇರಿ ಮಿಸ್ ಕರ್ನಾಟಕ ಆಗಿ ಆಯ್ಕೆಯಾದಳು. ಎರಡನೆಯ ಸ್ಥಾನ (ರನ್ನರ್ ಅಪ್) ಸಪ್ನಾ ಗುಪ್ತಾ ಮತ್ತು ಸಾಲಿನ್ ವರ್ಗೀಸ್. ಮಿಸ್ ಇಂಡಿಯಾ (1984) ರೇಖಾ ಹಂದೆ ಮತ್ತು ಗೌತಮ್ ಒಸ್ವಾಲ್ ಅವರಿಂದ ಆರತಿಗೆ ಕಿರೀಟ ತೊಡಿಸಲಾಯಿತು. *

ಮಿಸ್ ಕರ್ನಾಟಕ ಅರ್ಹತೆ ಹೇಗೆ?

ಕೇವಲ ದೇಹ ಸೌಂದರ್ಯ ಮಾತ್ರವಲ್ಲ. ಇತರ ಅನೇಕ ಗುಣಗೌರವಗಳನ್ನು ಕಂಡು ಸ್ಪರ್ಧೆಯ ನಿರ್ಣಾಯಕರು ಅಂಕಗಳನ್ನು ಕೊಟ್ಟರು. ಮುಖ್ಯವಾಗಿ ಈ ಐದು ಅಂಶಗಳನ್ನು ಗಮನಿಸಲಾಯಿತು.

- ಮುಖಚರ್ಯೆ – ಭಾವ.
- ದೇಹದ ಮಾಟ – ಆಕಾರ.
- ಉಡಿಗೆ ತೊಡಿಗೆ ಧರಿಸಿದ ರೀತಿ.!
- ರಂಗ ಪ್ರವೇಶ ಮಾಡಿದ ರೀತಿ, ನಿಲುವು, ಭಂಗಿ.
- ಸಾಮಾನ್ಯ ಜ್ಞಾನ (ಜನರಲ್ ನಾಲೇಜ್). *

ಪಾರಿತೋಷಕಗಳು

ಪ್ರಥಮ – ರೂ. 5,000/- + ರಜತ ಕರಂಡ + ವಿಮಲ್ ಸೀರೆ.

ದ್ವಿತೀಯ – ರೂ. 2,000/- + ವಿಮಲ್ ಸೀರೆ.

ತೃತೀಯ – ರೂ. 1,000/- + ವಿಮಲ್ ಸೀರೆ.

- ಇತರ ಮೂರು ಸಮಾಧಾನ ಪಾರಿತೋಷಕಗಳಿದ್ದುವು. *

"ಛೆ! ಸರ್ವಥಾ ಸಿನಿಮಾ ಸೇರುವುದಿಲ್ಲ"

- ಆರತಿ ಹುಕ್ಕೇರಿ

ಆರತಿ ಹುಕ್ಕೇರಿ ಅಪ್ಪಟ ಕನ್ನಡಿತಿ. ಹುಟ್ಟಿದ್ದು ಬೆಳಗಾವಿಯಲ್ಲಿ – ಅಕ್ಟೋಬರ್ 24, 1963ರಂದು. ತಂದೆ ಗೋಪಾಲ ದತ್ತಾತ್ರೇಯ ಹುಕ್ಕೇರಿ ಧಾರವಾಡದಲ್ಲಿ ಪಿ.ಡಬ್ಲ್ಯೂ.ಡಿ. ಸೂಪರಿಂಟೆಂಡೆಂಟ್ ಇಂಜಿನಿಯರ್. ಆರತಿಯ ಅಜ್ಜ ಮೈಸೂರು ಮಹಾರಾಜರ ಸಂಸ್ಥಾನದಲ್ಲಿ ಇಂಜಿನಿಯರ್ ಆಗಿದ್ದುದರಿಂದ, ಆರತಿಯ ಬಾಲ್ಯವೆಲ್ಲ ಬೆಂಗಳೂರಲ್ಲಿ ಕಳೆಯಿತು. ಬೆಳಗಾವಿಯ ಗೋಗಟೆ ಕಾಲೇಜಿನಲ್ಲಿ ಬಿ.ಕಾಂ. ಮಾಡಿದ ಆರತಿ ಚೆನ್ನಾಗಿ ಮಾತನಾಡುತ್ತಾರೆ. 'ತರಂಗ'ಕ್ಕಾಗಿ ನಡೆದ ಸಂದರ್ಶನ –

● ಮಿಸ್ ಕರ್ನಾಟಕ ಸ್ಪರ್ಧೆಯಲ್ಲಿ ಭಾಗವಹಿಸುವ ವಿಚಾರ ಹೇಗೆ ಬಂತು?

ಆರತಿ : ಸ್ಥಳೀಯ ಪತ್ರಿಕೆಯಲ್ಲಿ ಜಾಹಿರಾತು ಓದಿದೆ. ಮೊದಲು ಅಲಕ್ಷ್ಯ ಮಾಡಿದೆ. ಅನಂತರ ಸ್ನೇಹಿತೆಯರ ಒತ್ತಾಯ. ಅದಿಲ್ಲದಿದ್ದರೆ ಖಂಡಿತ ಭಾಗವಹಿಸುತ್ತಿರಲಿಲ್ಲ. ಕೊನೆಯ ದಿನವೇ ನಾನು ಫಾರ್ಮ್ ತುಂಬಿದ್ದು.

● ಮನೆಯಲ್ಲಿ ಎಲ್ಲರ ಪ್ರೋತ್ಸಾಹವಿತ್ತೆ?

ಆರತಿ : ಅಡ್ಡಿಯಂತೂ ಬರಲಿಲ್ಲ.

● ಬ್ಯೂಟಿ ಷೋಗಳಲ್ಲಿ ಭಾಗವಹಿಸಿದ ಹಿನ್ನೆಲೆ ಏನು?

ಆರತಿ : ಬೆಳಗಾವಿಯಲ್ಲಿ ಒಂಬತ್ತನೆಯ ತರಗತಿಯಲ್ಲಿದ್ದೆ. ಆಗ ಲಿಯೋ ಕ್ಲಬ್ಬಿನವರ 'ಸೌಂದರ್ಯ ಸ್ಪರ್ಧೆ'ಯಲ್ಲಿ ಭಾಗವಹಿಸಿದ್ದೆ. ಪ್ರಥಮ ರನ್ನರ್ ಅಪ್ ಆಗಿದ್ದೆ.



1984ರಲ್ಲಿ ಇಂಥದ್ದೇ ಸ್ಪರ್ಧೆಯಲ್ಲಿ ಫೈನಲ್‌ವರೆಗೆ ಬಂದಿದ್ದೆ.

● ಇದು ಕೇವಲ ಸೌಂದರ್ಯ ಸ್ಪರ್ಧೆ ಎಂಬುದು ಅರ್ಧ ಸತ್ಯ ಆಗಲಾರದೆ?

ಆರತಿ : ವಾಸ್ತವಿಕವಾಗಿ ಇಂಥ ಸ್ಪರ್ಧೆ ನಮ್ಮ ಒಳಗಿನ ಹಾಗೂ ಹೊರಗಿನ ಸೌಂದರ್ಯವನ್ನು ತೋರಿಸಲು ಸಹಕಾರಿ... ನಾನು ಬೆಳಗಾವಿಯಲ್ಲಿದ್ದಾಗ ಲಿಯೋ ಕ್ಲಬ್ಬಿನ ಅಧ್ಯಕ್ಷೆಯಾಗಿದ್ದೆ. (1982 - 83) ಅಲ್ಲಿಯ ಸಾರ್ವಜನಿಕ ಚಟುವಟಿಕೆಗಳಲ್ಲಿ ಸಾಕಷ್ಟು ಭಾಗವಹಿಸಿದ ಅನುಭವವಿದೆ. ಧಾರವಾಡಕ್ಕೆ ಬಂದ ಮೇಲೆ 1986ರಲ್ಲಿ 'ಧಾರವಾಡ ಜಿಮ್‌ಖಾನಾ'ದ ಚಿನ್ನದ ಹಬ್ಬದ ಸಂದರ್ಭದಲ್ಲಿ ಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮದ ಹೊಣೆ ನನಗೆ ವಹಿಸಿಕೊಟ್ಟರು. ಆಗ ನಾನು 'ಫ್ಯಾಶನ್ ಆಫ್ ಇಂಡಿಯಾ' ಎಂದು ಒಂದು ಕಾರ್ಯಕ್ರಮ ಯೋಜಿಸಿದ್ದೆ. ನಾಟಕ ಅಭಿನಯ, ಡಿಬೆಟಿಂಗ್ ನನಗೆ ತುಂಬ ಪ್ರೀತಿ.

● ಸಾಮಾನ್ಯವಾಗಿ ಮಿಸ್ ಸುಂದರಿ ಆದವರು ಸಿನಿಮಾ ಸೇರುತ್ತಾರೆ. ನಿಮಗೆ ಅಂಥ ಯಾವ ಯೋಜನೆಗಳಿವೆ?

ಆರತಿ : ಸರ್ವಥಾ ಸಿನಿಮಾ ಸೇರುವ ಯೋಚನೆ ಇಲ್ಲ.

● ಮುಂದೇನು ಮಾಡಬೇಕೆನ್ನುತ್ತೀರಿ?

ಆರತಿ : ನನ್ನದೇ ಆದ 'ಮಾಡೆಲ್ ಕೋ ಆರ್ಡಿನೇಟಿಂಗ್' ಸಂಸ್ಥೆ ತೆರೆಯಬೇಕು ಎಂಬ ಆಸೆ ಇದೆ. ಆದಕ್ಕಾಗಿ ಬೆಂಗಳೂರಿಗೆ ಹೋಗುತ್ತೇನೆ. ●

...-4

● ...ಎಸ್. ಎಲ್. ಕರಣಿಕ

ವಿವಿಧ ಪಾಚಿಗಳು

ಪುಟ್ಟವಮ್ಮಾ, ಕಳೆದವಾರ ಹಸುರು ನೀಲಿ ಪಾಚಿ ಹಾಗೂ ನೀಲಿಛಾಯೆ ಇಲ್ಲದ ಹುಲ್ಲು - ಹಸುರು ತೇಲುವ ಪಾಚಿಗಳನ್ನು ನೋಡಿದ್ದೆವಷ್ಟೆ? ಈ ... ಬದುಕು ಪ್ರಾರಂಭಿಸುವಾಗ ಒಂಟಿ ಕಣ ... ಕೋಶ ಕೂಟದಿಂದ ಕೂಡಿದ್ದುವಷ್ಟೆ? ವ... ...ಹುಕಣದತ್ತ ಸುಧಾರಣೆ ಹೊಂದುತ್ತ ... ... ಬಹುಕಣವಾಗಿರಲಿ ...ಗಳ ... ...ಶ ಭಿತ್ತಿ ಆವರಿಸಿಕೊಂ... ಆದರೊ... ...ಕೊಂಡಂತೆ ತೆಳ್ಳಗಿನ ... ಉಂಟಾಯಿತು. ... ಮಧ್ಯದಲ್ಲಿ ಕಣ ಕೇಂದ್ರ ಬೀಜ. ಈ ಕಣ ಬೀಜ ಮತ್ತು ಪರೆಯು ನಡುವೆ ಇರುವ ದ್ರವ ವಸ್ತು... ವಿಜ್ಞಾನಿಗಳು "ಸೈಟೊಪ್ಲಾಸ್ಮ್" ಎಂದು ಕರೆದರು. ಸೈಟೊಪ್ಲಾಸ್ಮ್ ಮತ್ತು ಕಣ ಬೀಜಗಳನ್ನು ಒಟ್ಟಾಗಿ 'ಪ್ರೊಟೊಪ್ಲಾಸ್ಮ್' ಎಂದು ಕರೆದರು. ಇಂದಿಗೂ ಎಲ್ಲಾ ಸಸ್ಯಗಳ ಕಣ ರಚನೆ ಇರುವುದು ಹೀಗೆಯೇ.

ಪಾಚಿಗಳ ಕಾಯಕ್ಕೆ ವಿಶೇಷವಾದೊಂದು ಹೆಸರಿದೆ ಗೊತ್ತೇ? 'ಥಾಲಸ್' ಎಂದು. ಇವುಗಳಲ್ಲಿ ಬೇರು, ಕಾಂಡ, ಎಲೆಗಳೆಂಬ ಭೇದವಿಲ್ಲ. ಥಾಲಸ್‌ಗಳು ಕಾಲಸಂದಂತೆ ಸುಧಾರಣೆ ಹೊಂದುತ್ತಾ, ಬೇರೆ ಬೇರೆ ಪಾಚಿಗಳು ಹುಟ್ಟಿಕೊಂಡವು. ಕೆಲ ಪಾಚಿಗಳು ನೀರಲ್ಲಿ ತೇಲಿಕೊಂಡು ಉದ್ದ ಲಾಡಿಯಂತೆ ಬೆಳೆದರೆ ಕೆಲವು ಬೀಳಲಿನಂತೆ ಇದ್ದು ಕಲ್ಲು ಬಂಡೆಗಳಿಗೆ ಅಂಟಿಕೊಂಡವು. ಕೆಲವು ವಿಸ್ತಾರ ಬಲೆಯಂತೆ ನೀರಲ್ಲಿ ಪಸರಿಸಿದರೆ ಇನ್ನು ಕೆಲವು ಕಾಗದದ ಹಾಳೆಯಂತೆ ನೀರಲ್ಲಿ ಮುಳುಗಿ ಬೆಳೆದವು. ಸಿಹಿ ನೀರ ತೊಟ್ಟಿಯಲ್ಲಿ, ತೇವ ...ತ ಮಣ್ಣಲ್ಲಿ, ಕಾಲುವೆ ತೀರದಲ್ಲಿ ಪಾಚಿಗಳನ್ನು ಕಂಡಿ... ...ವೆ ನೀನು? ಇಷ್ಟೇ ಅಲ್ಲ, ಕೆಲ ಪಾಚಿಗಳು ...ದ್ರದ ಉಪ್ಪು ನೀರಿಗೂ ಒಗ್ಗಿಕೊಂಡು ಬೆಳೆಯ... ಕಲಿತವು! ಕಲ್ಲು ಬಂಡೆಗಳಿಗೆ ಅಂಟಿಕೊಂಡು ನೀರ ಚಲನೆಗೆ ತುಯ್ದಾಡುವ ಹಾವಸೆಗಳೂ ಪಾಚಿಯ ಗುಂಪಿಗೆ ಸೇರಿದ ಸಸ್ಯಗಳು.

ಬಣ್ಣಬಣ್ಣದ ಪಾಚಿಗಳು! ಮಗೂ, ಪಾಚಿಗಳಿಗೆ ಬರೀ ಹಸುರು ಬಣ್ಣ ಮಾತ್ರ ಎಂದು ತಿಳಿದು ಬಿಟ್ಟಿ ನೀನೀಗ ಅಲ್ಲವೇ? ಆದರೆ ಹಳದಿ - ಬಂಗಾರ ವರ್ಣ, ಕಡು ಕಂದು ಮತ್ತು ಕೆಂಪು ಬಣ್ಣದ ಪಾಚಿಗಳೂ ಇವೆ! ಭೂಮಿಯನ್ನು ಸುತ್ತುವರಿದ ಮಹಾಸಾಗರದ ಆಳದಲ್ಲಿ ಈ ಹಸಿರು, ಕಂದು ಮತ್ತು ಕೆಂಪು ಪಾಚಿಗಳು ಬೆಳೆಯುತ್ತವೆ. ಇವುಗಳನ್ನು 'ಸಮುದ್ರ ಕಳೆ'ಗಳೆನ್ನುತ್ತಾರೆ. ಇವುಗಳಲ್ಲಿ ಕೆಲವು ನೂರಾರು ಮೀಟರುಗಳಷ್ಟು ಬೆಳೆದು ನೀರಲ್ಲಿ ತೇಲುವ ತೇಲು ಬೆಂಡನ್ನು ಹೊಂದಿರುತ್ತವೆ.

ಪುಟ್ಟು ಮರಿ, ಪಾಚೀ ಸಮೂಹ ಜಗತ್ತಿನ ಸೌರಶಕ್ತಿಯ ಮೂರರಲ್ಲಿ ಎರಡಂಶವನ್ನು ಬಳಸಿ ಜೈವಿಕ ಆಹಾರ ತಯಾರಿಸುತ್ತವೆಯೆಂದರೆ ಆಶ್ಚರ್ಯವಲ್ಲವೆ? ●

ಈ ಇರುವೆಗೆ ಹೊರ ಬರಲು ದಾರಿ ...ರಿಸಿ.



ಪ್ರತಿವಾರದ ಪದ - ಬಂಧ

– ಸಿ. ವಿಶ್. ... [illegible]

1	ಸಿ				ತ್ರಿ
2	ಕಾ				ಣಿ
3	ಸಿಂ				ಯ
4	ಆ				ಸಿ
5	ಹ				ವ

1. [illegible] ಅನುಭವ!

2. [illegible] 'ಆವರಣ' [illegible] ಅಲ್ಲ. [illegible]

3. [illegible] ವಸ್ತುಗಳನ್ನೋ 'ಸಂಗ್ರ'ಹಿಸಿಡುವ ಸ್ಥಳ!

4. 'ಆಸ'ರೆ ಸಿಗದವರಿಗೆ ಮನಸ್ಸಿನ ... 'ವಿಶ್ವಾಸ'.

5. 'ಹಾವ' ಕಂಡು ಬಾಲ ತುಂಡು... ರಾ'ಘವ'ನಿಗೆ ಕೈ ಕೊಡಿ!

(ಉತ್ತರ : ಮುಂದಿನ ವಾರ...)

ಕಳೆದ ವಾರದ ಪದಬಂಧದ ಉತ್ತರಗಳು

1 ಜನಜಂಗುಳಿ 2 ಬೆಂಕಿಪೆಟ್ಟಿಗೆ 3 ವರದಕ್ಷಿಣೆ 4 ಜನಜೀವನ 5 ವಾತಾವರಣ